
ಪುಸ್ತಕ ಪರಿಚಯ

# ‘ಯುವ ಸ್ಫೂರ್ತಿಯ ಹೊಂಗಿರಣ ಸ್ವಾಮಿ ವಿವೇಕಾನಂದ’

ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಗಳು ಈಗಾಗಲೇ ವಿವಿಧ ರೂಪಗಳಲ್ಲಿ, ವಿವಿಧ ಗಾತ್ರದ ಗ್ರಂಥಗಳಾಗಿ ಪ್ರಕಟಗೊಂಡಿವೆ. ಹೀಗಿದ್ದೂ ‘ಯುವ ಸ್ಫೂರ್ತಿಯ ಹೊಂಗಿರಣ ಸ್ವಾಮಿ ವಿವೇಕಾನಂದ’ ಎಂಬ ಸಂಕ್ಷಿಪ್ತ ಜೀವನ ಚರಿತ್ರೆ ಇದೀಗ ಹೊರಬಂದಿದೆ. ವಾಸನ್ ಪಬ್ಲಿಕೇಷನ್ಸ್ ಪ್ರಕಾಶನ ಸಂಸ್ಥೆಯು ಪ್ರಕಟಿಸಿದ ಜನಪ್ರಿಯ ಜೀವನ ಚರಿತ್ರೆಗಳ ಮಾಲಿಕೆಯಲ್ಲಿ ಇದು ಹೊಸ ಸೇರ್ಪಡೆಯಾಗಿದೆ.

ಒಂದು ಜೀವನ ಚರಿತ್ರೆಯು ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಜೀವನದ ಮುಖ್ಯ ಘಟನೆಗಳನ್ನು ದಾಖಲಿಸುತ್ತವೆ; ಕೆಲವೊಮ್ಮೆ ವಿಷಯಕ್ಕನುಗುಣವಾಗಿ ವ್ಯಕ್ತಿಯ ಸಾಧನೆ, ಕೃತಿ, ಸಂದೇಶ ಮುಂತಾದ ವಿವರಗಳನ್ನು ಒಳಗೊಂಡಿರುವುದೂ ಉಂಟು. ಸಾಧ್ಯವಾದಷ್ಟೂ ಉತ್ತಮ ಮಾಹಿತಿಗಳನ್ನು ಕಲೆಹಾಕಿ, ಪೂರಕ ವಿವರಗಳನ್ನು ನೀಡುವ ಜೀವನಚರಿತ್ರೆಗಳು ಹೆಚ್ಚು ಉಪಯುಕ್ತವಾಗುತ್ತವೆ. ಪ್ರಸ್ತುತ ಗ್ರಂಥದಲ್ಲಿ ಸ್ವಾಮೀಜಿ ಜೀವನದ ಪ್ರಮುಖ ಘಟನೆಗಳನ್ನು ವಿವರಿಸುವುದರೊಂದಿಗೆ, ಅಲ್ಲಲ್ಲಿ ಸ್ವಾಮೀಜಿ ಸಂದೇಶಗಳನ್ನೂ ದಪ್ಪಕ್ಷರದಲ್ಲಿ ಮುದ್ರಿಸಲಾಗಿದೆ. ಇದು ಓದುಗರಿಗೆ ಹೆಚ್ಚು ಅನುಕೂಲ ಮಾಡಿಕೊಡುತ್ತದೆ. ನಡುನಡುವೆ ಸ್ವಾಮಿ ವಿವೇಕಾನಂದರ ವಿವಿಧ ಚಿತ್ರಗಳನ್ನೂ ಮುದ್ರಿಸಿ, ಅವುಗಳ ವಿವರಣೆಯನ್ನೂ ನೀಡಲಾಗಿದೆ. *(ಇಲ್ಲಿ ಗಮನಾರ್ಹವಾದ ಒಂದು ತಪ್ಪನ್ನು ಉಲ್ಲೇಖಿಸಲೇಬೇಕು – ೨೯ನೇ ಪುಟದಲ್ಲಿ ‘ಬಾಲಕ ವಿವೇಕಾನಂದ (ನರೇಂದ್ರ) ತನ್ನ ಕುಟುಂಬ ಸದಸ್ಯರೊಂದಿಗೆ’ ಎಂಬ ಶೀರ್ಷಿಕೆಯೊಂದಿಗೆ ಪ್ರಕಟವಾದ ಚಿತ್ರವು ಸ್ವಾಮೀಜಿಗೆ ಸಂಬಂಧಿಸಿದ ಚಿತ್ರವಲ್ಲ. ಇದು ಶ್ರೀಮಾತೆಯವರ ಹಾಗೂ ಅವರ ಕುಟುಂಬದವರ ಚಿತ್ರ. ಈ ಚಿತ್ರದಲ್ಲಿ ನರೇಂದ್ರ ಇಲ್ಲವೇ ಇಲ್ಲ. ಇಂತಹ ಪ್ರಮುಖ ತಪ್ಪು ಎದ್ದು ಕಾಣುವಂತಿದೆ. ಎರಡನೇ ಮುದ್ರಣದಲ್ಲಿ ಇದನ್ನು ಲೇಖಕರು ಸರಿಪಡಿಸುವರೆಂದು ನಮ್ಮ ನಂಬಿಕೆ.)* ೧೨ ಅಧ್ಯಾಯಗಳಲ್ಲಿ ಸ್ವಾಮಿ ವಿವೇಕಾನಂದರ ಜೀವನದ ಪ್ರಮುಖ ಅಂಶಗಳನ್ನು ಅಡಕಗೊಳಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ಭಾಷೆಯ ಸರಳತೆ, ಘಟನೆಗಳ ನೇರ ನಿರೂಪಣೆ ಇಲ್ಲಿನ ವಿಶೇಷತೆ.




**ಕೃತಿ:** ಯುವ ಸ್ಫೂರ್ತಿಯ ಹೊಂಗಿರಣ ಸ್ವಾಮಿ ವಿವೇಕಾನಂದ
**ಲೇಖಕರು :** ನರೇಂದ್ರ ಪಾರೆಕಟ್
**ಪ್ರಕಾಶನ :** ವಾಸನ್ ಪಬ್ಲಿಕೇಷನ್ಸ್
ನಂ. 25, ವಾಸನ್ ಟವರ್ಸ್, ಡಾ. ಟಿ.ಸಿ.ಎಂ. ರಾಯನ್ ರಸ್ತೆ (ಗೂಡ್ಸ್‌ಶೆಡ್ ರಸ್ತೆ), ಬೆಂಗಳೂರು – 560 053
ಮೊ.: 9845380992
**ಬೆಲೆ:** 150/– **ಪುಟ:** 136

ಈ ಗ್ರಂಥದ ರಚನೆಯ ಶೈಲಿಯನ್ನು ತಿಳಿಸಿಕೊಡುವ ಒಂದು ಭಾಗ ಇಲ್ಲಿದೆ. ಕನ್ಯಾಕುಮಾರಿಯಲ್ಲಿ ಸ್ವಾಮೀಜಿ ಧ್ಯಾನನಿರತರಾಗಿದ್ದ ಘಟನೆಯನ್ನು ಇಲ್ಲಿ ಈ ರೀತಿ ವಿವರಿಸಲಾಗಿದೆ: ‘‘ಕನ್ಯಾಕುಮಾರಿಯ ಬಂಡೆಯ ಮೇಲೆ ಕುಳಿತುಕೊಂಡ ಸ್ವಾಮೀಜಿಯವರು, ಭರತಖಂಡವು ಅತ್ಯುನ್ನತ ಕೀರ್ತಿ ಶಿಖರದಿಂದ ಅಧಃಪತನದತ್ತ ಸಾಗಿದ ಮೂಲ ಕಾರಣವನ್ನು ಆಳವಾಗಿ ಯೋಚಿಸಿಕೊಂಡರು. ಧರ್ಮವೇ ಭಾರತೀಯರ ಉಸಿರು, ಅವರ ಧಮನಿಗಳಲ್ಲಿ ಧರ್ಮದ ಮೌಲ್ಯ ಅಡಗಿದೆ ಎಂಬುದನ್ನೂ ಯೋಚಿಸಿಕೊಂಡರು. ದೇಶದ ದಟ್ಟ ದಾರಿದ್ರ್ಯದ ಕುರಿತು ಆಳವಾಗಿ ಯೋಚನಾಮಗ್ನರಾದರು. ಪಾಶ್ಚಾತ್ಯ ದೇಶಗಳಿಗೆ ಹೋಗಿ ಧರ್ಮವನ್ನು ಅವರಿಗೆ ಬೋಧಿಸಿ ಅಲ್ಲಿಂದ ದುಡ್ಡನ್ನು ತಂದು, ಭರತಖಂಡದ ಪುನರುತ್ಥಾನಕ್ಕೆ ಪ್ರಯತ್ನಪಡಬೇಕು ಎಂದವರು ಅಲ್ಲೇ ಶಪಥ ತೊಟ್ಟರಲ್ಲದೇ, ಆ ಮೂಲಕ ಆದಷ್ಟು ಬೇಗ ಭರತಖಂಡದ ಸಮಗ್ರ ಚಿತ್ರಣವನ್ನೇ ಬದಲಾಯಿಸಬೇಕೆನ್ನುವ ಇಚ್ಛಾಶಕ್ತಿಯತ್ತ ತಮ್ಮ ಯೋಚನೆಗಳಲ್ಲಿ ತೊಡಗಿಸಿಕೊಂಡರು.’’

ಮೂಲತಃ ಪತ್ರಿಕೋದ್ಯಮಿಯಾಗಿರುವ ಲೇಖಕರು, ಪುಸ್ತಕ ರಚನೆಯಲ್ಲಿ ತೊಡಗಿರುವುದು ಶ್ಲಾಘನೀಯವಾದ ಕಾರ್ಯವಾಗಿದೆ. ಸುಲಲಿತ ಓದು, ಸರಳ ಗ್ರಹಿಕೆಗೆ ಹೆಚ್ಚಿನ ಗಮನ ಕೊಡಬೇಕಾದ ಅಗತ್ಯ ಇಲ್ಲಿ ಕಂಡುಬರುತ್ತದೆ. ಮಾಹಿತಿಗಳ ನಿಖರತೆ, ಭಾಷಾಶುದ್ಧಿ ಹಾಗೂ ವಿಷಯದ ಸಮಗ್ರತೆ ಇನ್ನಷ್ಟು ಸುಧಾರಿಸಬೇಕಾದ ಅಗತ್ಯವಿದೆ. ಸಾಮಾನ್ಯವಾಗಿ ಎಲ್ಲ ಲೇಖಕರು ಮಾಡುವಂತೆ, ಎರಡನೇ ಮುದ್ರಣದ ವೇಳೆ ಇವನ್ನೆಲ್ಲ ಗಮನಿಸಿ ಕೃತಿಯನ್ನು ಇನ್ನಷ್ಟು ಉತ್ತಮಗೊಳಿಸುವುದು ಸಾಧ್ಯವಿದೆ. ಲೇಖಕರ ಈ ಪ್ರಯತ್ನ ಇನ್ನಷ್ಟು ಮುಂದುವರಿಯಲಿ ಎಂದು ಹಾರೈಸೋಣ.